ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ
ದಂಡಾಧಿಕಾರಿಯವರ ನ್ಯಾಯಾಲಯ**,** ಚಿಕ್ಕಮಗಳೂರು

ದಿನಾಂಕಃ **24.01.2023**

ಸಿ.ಸಿ.ನಂ.**1852/2022**

ಪಿರ್ಯಾದುದಾರರು : ರಾಜ್ಯದ ಪರವಾಗಿ ನಗರ ಠಾಣಾ ಪೋಲೀಸರು ಚಿಕ್ಕಮಗಳೂರು

ವಿರುದ್ಧ

ಆರೋಪಿತರು: 1. ಶ್ರೀಮತಿ ಇಂದಿರಾ ಕೋಂ ಸಿದ್ದಪ್ಪ ಶೆಟ್ಟಿ
ವಯಸ್ಸುಃ 45 ವರ್ಷ, ಕೂಲಿ
ವಾಸಃ ಕಲಾಣ ನಗರ
ಚಿಕ್ಕಮಗಳೂರು.

2. ಶರತ್ ?ಬಿನ್ ?ಸಿದ್ದಪ್ಪ ಶೆಟ್ಟಿ
ವಯಸ್ಸುಃ 24 ವರ್ಷ,
ವಾಸಃ ಕಲಾಣ ನಗರ
ಚಿಕ್ಕಮಗಳೂರು.

## ದೋ ಷಾ ರೋ ಪ ಣೆ

ಚಿಕ್ಕಮಗಳೂರಿನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯಾದ ಶ್ರೀ ನಂದೀಶ ಆರ್.ಪಿ. ಬಿ.ಎ., (ಲಾ) ಎಲ್‌ಎಲ್.ಎಂ, ಆದ ನಾನು ಮೇಲೆ ನಮೂದು ಮಾಡಿರುವ ಆರೋಪಿತರಾದ ನಿಮ್ಮ ವಿರುದ್ಧ ಹೊರಿಸುವ ದೋಷಾರೋಪಣೆ ಏನೆಂದರೆಃ

ಚಾಸಾಃ1 ರವರು ನಗರ ಸಭೆ ವ್ಯಾಪ್ತಿಯ ವಾರ್ಡ್? ನಂಃ2 ಆತ್ರಯ ಬಡಾವಣೆ ಕಲ್ಯಾಣನಗರ ನಗರಾಸಭಾ ಅಸೆಸ್ಮೆಂಟ್ ?ನಂಃ2 ಮನೆ ನಂಃ22 ನ್ನು ಚಾಸಾಃ4 ರವರಿಂದ ಕ್ರಯಕ್ಕೆ ಪಡೆದುಕೊಂನಡು ಸದರಿ ಸ್ವತ್ತನ್ನು ದಿನಾಂಕ 7.12.2014 ಮತ್ತು 10.8.2015 ರಂದು 1 ನೇ ಆರೋಪಿಯಾದ ನಿಮಗೆ ಬಾಡಿಗೆ ಕರಾರು ಪತ್ರದಲ್ಲಿ ಬಾಡಿಗೆಗೆ ನೀಡಿದ್ದು , 1 ಮತ್ತು 2 ನೇ ಆರೋಪಿತರಾದ ನೀವುಗಳು ಚಾಸಾಃ1 ರವರ ಮನೆಯ ಇ ಸ್ವತ್ತು , ಖಾತಾ ಎಕ್ಸಾಟ್ರಾಕ್ಟ್ ನಗರ ಸಭಾ ಸ್ವಾಧೀನ ಪತ್ರದ ದಾಖಲೆಗಳನ್ನು ನಿಮಗೆ ಸೇರಿದ್ದಾಗಿ

ಸುಳ್ಳು ಸೃಷ್ಟನೆ ಮಾಡಿ ಚಾಸಾಃ1 ರವರಿಗೆ ಮೋಸ ಮಾಡಿದ್ದು ಆರೋಪಿತರಾದ ನೀವುಗಳು ಭಾ.ದಂ.ಸಂ.ಕಲಂ.**465** ಸಹಕಲಂ **34** ರ ಅಡಿಯಲ್ಲಿ ಅಪರಾಧ ಮಾಡಿರುತ್ತೀರಿ ಎಂದೂಃ

ಮೇಲೆ ಹೇಳಲಾದ ಅವದಿಯಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾಃ1 ರವರಿಗೆ ಸೇರಿದ ಮನೆಯ ಇ ಸ್ವತ್ತು , ಖಾತಾ ಎಕ್ಸಾಟ್ರಾಕ್ಟ್ ನಗರ ಸಭಾ ಸ್ವಾಧೀನ ಪತ್ರದ ದಾಖಲೆಗಳನ್ನು ಸುಳ್ಳು ಸೃಷ್ಟನೆ ಮಾಡಿ ಸದರಿ ಮನೆಯು ನಿಮಗೆ ಸೇರಿದ್ದು ಎಂದು ಹೇಳಿ ಚಾಸಾಃ1 ರವರಿಗೆ ಮೋಸ ಮಾಡಿದ್ದು ಆರೋಪಿತರಾದ ನೀವುಗಳು ಭಾ.ದಂ.ಸಂ.ಕಲಂ.**468** ಸಹಕಲಂ **34** ರ ಅಡಿಯಲ್ಲಿ ಅಪರಾಧ ಮಾಡಿರುತ್ತೀರಿ ಎಂದೂಃ

ಮೇಲೆ ಹೇಳಲಾದ ಅವದಿಯಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾಃ1 ರವರಿಗೆ ಸೇರಿದ ಮನೆಯ ಇ ಸ್ವತ್ತು , ಖಾತಾ ಎಕ್ಸಾಟ್ರಾಕ್ಟ್ ನಗರ ಸಭಾ ಸ್ವಾಧೀನ ಪತ್ರದ ದಾಖಲೆಗಳನ್ನು ಸುಳ್ಳು ಸೃಷ್ಟನೆ ಮಾಡಿ ಸದರಿ ಮನೆಯು ನಿಮಗೆ ಸೇರಿದ್ದು ದಾಖಲೆಗಳನ್ನು ನೈಜ ದಾಖಲೆಗಳೆಂದು ಉಪಯೋಗಿಸಿ ಚಾಸಾಃ1 ರವರಿಗೆ ಮೋಸ ಮಾಡಿದ್ದು ಆರೋಪಿತರಾದ ನೀವುಗಳು ಭಾ.ದಂ.ಸಂ.ಕಲಂ.**471** ಸಹಕಲಂ **34** ರ ಅಡಿಯಲ್ಲಿ ಅಪರಾಧ ಮಾಡಿರುತ್ತೀರಿ ಎಂದೂಃ

ಮೇಲೆ ಹೇಳಲಾದ ಅವದಿಯಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾಃ1 ರವರಿಗೆ ಸೇರಿದ ಮನೆಯ ದಾಖಲೆಗಳನ್ನು ನಿಮಗೆ ಸೇರಿದೆಂದು ದಾಖಲೆಗಳನ್ನು ಸೃಷ್ಟಿಸಿ ಚಾಸಾಃ1 ರವರಿಗೆ ಮೋಾಸ ಮಾಡಿದ್ದು ಆರೋಪಿತರಾದ ನೀವುಗಳು ಭಾ.ದಂ.ಸಂ.ಕಲಂ.**420** ಸಹಕಲಂ **34** ರ ಅಡಿಯಲ್ಲಿ ಅಪರಾಧ ಮಾಡಿರುತ್ತೀರಿ ಎಂದೂಃ

ಮೇಲೆ ಹೇಳಲಾದ ಅವದಿಯಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾಃ1 ರವರಿಗೆ ಸೇರಿದ ಮನೆಯ ದಾಖಲೆಗಳನ್ನು ನಿಮಗೆ ಸೇರಿದೆಂದು ದಾಖಲೆಗಳನ್ನು ಸೃಷ್ಟಿಸಿ ಚಾಸಾಃ1 ರವರಿಗೆ ಮೋಾಸ ಮಾಡಿದ್ದು

ದಿನಾಂಕ 21.1.2019 ರಂದು ಚಾಸಾಃ1 ರವರು ನಿಮ್ಮನ್ನು ಕೇಳಲು ಬಂದಾಗ ಚಾಸಾಃ1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಅವರಿಗೆ ಅವಮಾನ ಮಾಡಿದ್ದು ಆದ್ದರಿಂದ ಆರೋಪಿತರಾದ ನೀವುಗಳು ಭಾ.ದಂ.ಸಂ.ಕಲಂ.**504** ಸಹಕಲಂ **34** ರ ಅಡಿಯಲ್ಲಿ ಅಪರಾಧ ಮಾಡಿರುತ್ತೀರಿ ಎಂದೂಃ

ಮೇಲೆ ಹೇಳಲಾದ ಅವದಿಯಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾಃ1 ರವರಿಗೆ ಸೇರಿದ ಮನೆಯ ದಾಖಲೆಗಳನ್ನು ನಿಮಗೆ ಸೇರಿದೆಂದು ದಾಖಲೆಗಳನ್ನು ಸೃಷ್ಟಿಸಿ ಚಾಸಾಃ1 ರವರಿಗೆ ಮೋಸ ಮಾಡಿದ್ದು ದಿನಾಂಕ 21.1.2019 ರಂದು ಚಾಸಾಃ1 ರವರು ನಿಮ್ಮನ್ನು ಕೇಳಲು ಬಂದಾಗ ಚಾಸಾಃ1 ರವರಿಗೆ ಕೈಗಳಿಂದ ಥಳಿಸಿ ಸಾಮಾನ್ಯ ಸ್ವರೂಪದ ನೊವನ್ನುಂಟುಮಾಡಿದ್ದು ಆದ್ದರಿಂದ ಆರೋಪಿತರಾದ ನೀವುಗಳು ಭಾ.ದಂ.ಸಂ.ಕಲಂ.**323** ಸಹಕಲಂ **34** ರ ಅಡಿಯಲ್ಲಿ ಅಪರಾಧ ಮಾಡಿರುತ್ತೀರಿ ಎಂದೂಃ

ಮೇಲೆ ಹೇಳಲಾದ ಅವದಿಯಲ್ಲಿ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾಃ1 ರವರಿಗೆ ಸೇರಿದ ಮನೆಯ ದಾಖಲೆಗಳನ್ನು ನಿಮಗೆ ಸೇರಿದೆಂದು ದಾಖಲೆಗಳನ್ನು ಸೃಷ್ಟಿಸಿ ಚಾಸಾಃ1 ರವರಿಗೆ ಮೋಸ ಮಾಡಿದ್ದು ದಿನಾಂಕ 21.1.2019 ರಂದು ಚಾಸಾಃ1 ರವರು ನಿಮ್ಮನ್ನು ಕೇಳಲು ಬಂದಾಗ ಚಾಸಾಃ1 ರವರಿಗೆ ಕೊಲೆ ಬೆದರಿಕೆಯನ್ನು ಹಾಕಿದ್ದು ಆದ್ದರಿಂದ ಆರೋಪಿತರಾದ ನೀವುಗಳು ಭಾ.ದಂ.ಸಂ.ಕಲಂ.**506** ಸಹಕಲಂ **34** ರ ಅಡಿಯಲ್ಲಿ ಅಪರಾಧ ಮಾಡಿರುತ್ತೀರಿ ಎಂದು ನಿಮ್ಮ ವಿರುದ್ಧ ಈ ಆರೋಪಣೆ ಹೊರಿಸಲಾಗಿದೆ.

ಮೇಲಿನ ಆರೋಪಣೆ ಬಗ್ಗೆ ಅಧಿವಿಚಾರಣೆ ಈ ನ್ಯಾಯಾಲಯದಿಂದ ನಡೆಸಲ್ಪಡುತ್ತದೆ ಎಂದು ಈ ಮೂಲಕ ನಿರ್ದೇಶನ ನೀಡಲಾಗಿದೆ.

sd/-

[ನಂದೀಶ ಆರ್.ಪಿ.]
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಸಿಜೆಎಂ ಚಿಕ್ಕಮಗಳೂರು